ಬದುಕಿಗೆ ರೂಪಕದಂತಿದೆ. ತಿಂಗಳ ಋಜುತ್ವದ ರಕ್ತವನ್ನು ಹೀರಿಕೊಂಡು ಸಮಾಧಾನಗೊಳಿಸುವ 'ಸ್ಯಾನಿಟರಿ ಪ್ಯಾಡ್'ನಂತೆಯೇ ದಿವಾಕರನು ದಿವ್ಯಾಳ ವಿಚಾರದಲ್ಲಿನ ಎಲ್ಲ ಘೋರ ಸತ್ಯಗಳನ್ನು ಒಳಗೊಳಗೇ ನುಂಗಿಕೊಂಡು ಹೆಂಡತಿ ಶಾಲಿನಿ ಮತ್ತು ಮಗಳು ದಿವ್ಯಾಳ ದಾರಿಯನ್ನು ಸಹನೀಯಗೊಳಿಸುತ್ತಾನೆ. ದಿವ್ಯಾಳಿಗೆ ಎಲ್ಲ ಸತ್ಯ ಗೊತ್ತಾಗುವ ಹೊತ್ತಿಗೆ ಆಕೆಯ ಪಾಲಿಗೆ ದಿವಾಕರನು ತಾಯಿಯೇ ಆಗಿಬಿಡುತ್ತಾನೆ. ಈ ಕಥೆ ಆಧುನಿಕ ಜಗತ್ತಿನಲ್ಲಿ ನಿರುಮ್ಮಳವಾಗಿ ಬದುಕಲೂ ಸಹ ಮನುಷ್ಯ ಹೇಗೆಲ್ಲ ಸತ್ಯವನ್ನು ಸುಳ್ಳಾಗಿಸುವ, ಸುಳ್ಳುಗಳನ್ನು ಸತ್ಯವಾಗಿಸುವ ಆಟದೊಳಗೆ ತನಗೇ ತಿಳಿಯದಂತೆ ತನ್ನ ತಾನೇ ತೊಡಗಿಸಿಕೊಂಡು, ಆ ಆಟದಿಂದ ಹೊರಬರಲಾಗದೇ ಒದ್ದಾಡುತ್ತಾನೆ ಎಂಬ ವಿಚಾರವನ್ನು ಮನದಟ್ಟು ಮಾಡುತ್ತದೆ.

'ಕಳಚಿದ ಬೇರು' ಕಥೆ ವೈದ್ಯಕೀಯ ಲೋಕದ ಕರಾಳ ದಂಧೆಯ ಆಳ ಅಗಲವನ್ನು ಅನಾವರಣ ಮಾಡುವುದರೊಂದಿಗೆ ಅದರ ಹಿಂದಿನ ಕಾರಣಗಳನ್ನೂ ಶೋಧಿಸುತ್ತದೆ. ಲಕ್ಷ, ಕೋಟಿಗಳ ಲೆಕ್ಕದಲ್ಲಿ ಡೊನೇಷನ್ ಕೊಟ್ಟು ವೈದ್ಯಕೀಯ ಕ್ಷೇತ್ರಕ್ಕೆ ಬರುವ ವೈದ್ಯರು, ರೋಗಿಗಳ ಮತ್ತು ಅವರ ಕುಟುಂಬದವರ ಹಿತಾಸಕ್ತಿಗಳನ್ನು ಕಡೆಗಣಿಸಿ ಔಷಧಿ ಕಂಪನಿಗಳು ಒಡ್ಡುವ ಆಮಿಷಗಳಿಗೆ ಒಳಗಾಗುವುದು ಸಹಜವಾಗಿದೆ! ಇಲ್ಲಿ ತಪ್ಪು ಯಾರದು? ವೈದ್ಯರದೊ? ನಂಬಿಕೆಯಿಟ್ಟು ಆಸ್ಪತ್ರೆಗೆ ಬರುವ ರೋಗಿಗಳದ್ದೊ? ಮನುಷ್ಯನ ಸಹಜ ಸಾವನ್ನು ಕಸಿದುಕೊಳ್ಳುತ್ತಿರುವ ವೈದ್ಯಕೀಯ ಸೌಲಭ್ಯಗಳದ್ದೊ? ಎಂಬುದನ್ನು ಕಥೆ ಚರ್ಚಿಸುತ್ತದೆ. ವೈದ್ಯಕೀಯ ವೃತ್ತಿಯಲ್ಲಿ ಮೂವತ್ತು ವರ್ಷಗಳ ಅನುಭವವಿರುವ ವೈದ್ಯ ಶಾಂತಾರಾಮನಿಗೆ ರೋಗಿಗೆ ಅಳವಡಿಸಬಹುದಾದ ವೈದ್ಯಕೀಯ ಸಲಕರಣೆಗಳನ್ನು ಮೀರಿ ರೋಗಿಯ ದೇಹಸ್ಥಿತಿ ಮುಖ್ಯವಾಗುತ್ತದೆ. ಈಗಿನ ವೈದ್ಯರು ರೋಗ ಮತ್ತು ದೇಹಸ್ಥಿತಿ, ವಯಸ್ಸು, ಕುಟುಂಬದ ಆರ್ಥಿಕ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಳ್ಳದೇ ಆಧುನಿಕ ಸೌಲಭ್ಯಗಳನ್ನು ಬಳಸುವುದರ ಮೂಲಕ ರೋಗಿ ಹಾಗೂ ರೋಗಿಯ ಕುಟುಂಬ ಸಂಕಟಪಡುವಂತೆ ಮಾಡುತ್ತಾರೆ. ಶಾಂತಾರಾಮನಂಥ ವೈದ್ಯರು ಈ ದಿನಗಳಲ್ಲಿ ಸಿಕ್ಕುವುದು ತುಂಬಾ ವಿರಳ ಎನ್ನಬೇಕು. ಆದರೆ, ಎಲ್ಲೆಲ್ಲೂ ರಾಘವನಂಥ ವೈದ್ಯರು, ಡಾ. ಮಾಧವಿ ಮೆನನ್‌ನಂಥ ಆಸ್ಪತ್ರೆಯ ಆಡಳಿತ ಮಂಡಳಿಯವರು ತುಂಬಿರುವುದಕ್ಕೆ ವೈದ್ಯಕೀಯ ವೃತ್ತಿ ಕಲಿಯಲು ನಿಗದಿಪಡಿಸಿದ ಡೊನೇಷನ್ ಹಾವಳಿಯೂ ಒಂದು ಕಾರಣವಾಗಿದೆ ಎಂಬುದನ್ನು ಓದುಗನಿಗೆ ಕಥೆ ಸೂಚ್ಯವಾಗಿ ದಾಟಿಸುತ್ತದೆ.

ಅನುಪಮಾ ಅವರು ಸಂಬಂಧಗಳ ಕುರಿತಾದ ವಿಚಾರಗಳನ್ನು ಕಥೆಯೊಳಗೆ ಅದೆಷ್ಟು ಆರ್ದ್ರವಾಗಿ ಕಟ್ಟಿಕೊಡುತ್ತಾರೆ ಎಂಬುದಕ್ಕೆ 'ಕುಂತ್ಯಮ್ಮಳ ಮಾರಾಪು' ಕಥೆ ನಿದರ್ಶನದಂತಿದೆ. ಈ ಕಥೆಯನ್ನು ಓದಿದ ಯಾರಿಗಾದರೂ ಎದೆಯೊಳಗೆ ಹೇಳಲಾಗದ ನಿರ್ವಾತವೊಂದು ಆವರಿಸಿ ಇನ್ನಿಲ್ಲದ ಸಂಕಟ ಆವರಿಸಿಕೊಂಡರೆ ಅಚ್ಚರಿಯಿಲ್ಲ. ಬದುಕನ್ನು ಆವರಿಸಿಕೊಂಡಿರುವ ಸಂಬಂಧಗಳ ಕಾರಣವಾಗಿ ಮನುಷ್ಯ ಎದುರಿಸಬಹುದಾದ ಸಂದಿಗ್ಧಗಳು ಅದೆಷ್ಟು ಭಯಾನಕವಾಗಿರುತ್ತವೆ ಎಂಬುದನ್ನು ಈ ಕಥೆ ಅರಿವಿಗೆ ತರುತ್ತದೆ. ಇಲ್ಲಿ ಕಾಣಸಿಗುವ ಕುಂತ್ಯಮ್ಮ ಎಲ್ಲರ ಬದುಕಿನಲ್ಲಿರಬಹುದಾದ ವಿಘಟಿತ ಸಂಬಂಧಗಳು ಎದುರಿಸುವ ಮನೋಸಂಕಟಕ್ಕೆ ಸಾಕ್ಷಿಯೆಂಬಂತೆ ಕಥೆಯೊಳಗೆ ಮೈದಳೆದಿದ್ದಾಳೆ. ಆಕೆಯ ದೈಹಿಕ ಸಮಸ್ಯೆಯನ್ನು ಕೇಂದ್ರವಾಗಿರಿಸಿಕೊಂಡು ಮನುಷ್ಯ ಮನುಷ್ಯರ, ಗಂಡಿನ, ಹೆಣ್ಣಿನ ಸಂಬಂಧಗಳ ಆಳ ಅಗಲವನ್ನು ಕಥೆಗಾರ್ತಿ ಶೋಧಿಸಲು ಪ್ರಯತ್ನಿಸುತ್ತಾರೆ. ಆಸ್ತಿಯ ಮೇಲೆ ಹಕ್ಕು ಸಾಧಿಸುವುದಕ್ಕಾಗಿ ನಡೆಯುವ ಕೌಟುಂಬಿಕ ಕಾಳಗದಲ್ಲಿ ಕುಂತ್ಯಮ್ಮಳು 'ಉಚ್ಚೆ ಬಟ್ಟೆ' ಸುಡುವ ಕ್ರಿಯೆ ಒಳಗಿನ ಸಂಬಂಧಗಳು ಶಿಥಿಲಗೊಳ್ಳುವುದಕ್ಕೆ ರೂಪಕದಂತೆ ಮೂಡಿಬಂದಿದೆ. ಕಥೆಯಲ್ಲಿನ ಮಾರಾಪು ಎನ್ನುವುದು ನಮ್ಮ ಪಾಲಿನ ಬದುಕಿನಲ್ಲಿನ ಸಂಕೀರ್ಣವಾದ ಸಂಬಂಧಗಳನ್ನು ನಿರ್ವಹಿಸುವುದಕ್ಕೆ ತಡಕಾಡುವುದರ ಮಾರಾಪೇ ಆಗುತ್ತದೆ. ಕಥೆಯ ಅಂತ್ಯದಲ್ಲಿ ಬರುವ ಫ್ಯಾಂಟಸಿ ಚಿತ್ರಣ ಎದೆ ತೇವವಾಗುವಂತೆ ಮಾಡುತ್ತದೆ. ಅಲ್ಲಿ, 'ನಮ್ಮ ನಮ್ಮ ಮಾರಾಪನ್ನು ನಾವೇ ಹೊರಬೇಕು ಅಲ್ವ...' ಎಂದು ಮಾಲಿನಿಗೆ ಕುಂತ್ಯಮ್ಮ ಹೇಳುವ ಮಾತುಗಳು ಬೇರೆ ಬೇರೆ ಆಯಾಮಗಳಲ್ಲಿ ಆಲೋಚಿಸುವಂತೆ ಮಾಡುತ್ತವೆ. ಈ ಕುಂತ್ಯಮ್ಮ ನಮ್ಮದೇ ಕೇರಿಯೊಳಗಿನ ಯಾವುದೋ ಒಂದು ಮನೆಯ ಮುಂದೆ ಕುಂತು